■ ಹನಿ

## ಎರಡನೇ ಮದುವೆ ಕಥೆ

‘ಫಲಕ್ ಎಂಬ ಹೆಸರಿನ ಮಾಡೆಲ್‌ಳನ್ನು ನಾನು ಈವರೆಗೆ ನೋಡಿಯೇ ಇಲ್ಲ. ಅವಳ್ಯಾರೆಂದು ಗೊತ್ತೇ ಇಲ್ಲ. ನನ್ನ ಮೊದಲ ಹೆಂಡತಿಗೆ ತಲಾಖ್ ಕೊಟ್ಟು ಫಲಕ್‌ಳನ್ನು ಮದುವೆ ಮಾಡಿಕೊಂಡಿದ್ದೇನೆ ಎಂಬುದು ಶುದ್ಧ ಸುಳ್ಳು ಸುದ್ದಿ. ಯಾರೋ ನನ್ನ ತೇಜೋವಧೆ ಮಾಡಲು ಈ ಸುದ್ದಿ ಹಬ್ಬಿಸುತ್ತಿದ್ದಾರೆ’ ಎಂದು ಬಾಲಿವುಡ್‌ನ ಬಹುಬೇಡಿಕೆಯ ಖವ್ವಾಲ್, ರಾಹತ್ ಫತೇ ಅಲಿ ಖಾನ್ ಅಲವತ್ತುಕೊಂಡಿದ್ದಾರೆ. ಪಾಕಿಸ್ತಾನದ ಈ ಸೂಫೀ ಹಾಡುಗಳ ಗಾಯಕ ಪಾಕಿಸ್ತಾನದಿಂದಲೇ ಈ ಸ್ಪಷ್ಟೀಕರಣ ಕೊಟ್ಟಿದ್ದಾರೆ. ‘ನನ್ನ ಮುಂದಿನ ಆಲ್ಬಂ ಪೂರ್ತಿ ಭಾರತದಲ್ಲೇ ರೆಕಾರ್ಡಿಂಗ್ ಆಗಲಿದೆ. ಫೆಬ್ರುವರಿ 14ರಂದು ಬಹುತೇಕ ಅದರ ಬಿಡುಗಡೆ. ನನ್ನ ವಿರುದ್ಧ ಅಪಪ್ರಚಾರ ಮಾಡುವವರಿಗೆ ಕೆಲಸದ ಮೂಲಕ ಉತ್ತರ ನೀಡುತ್ತೇನೆ’ ಎಂದೂ ಸೇರಿಸಿದ್ದಾರೆ.

ರಾಹತ್ ಫತೇ ಅಲಿ ಖಾನ್, ಪಾಕಿಸ್ತಾನದ ಖ್ಯಾತ ಖವ್ವಾಲಿ ಗಾಯಕ ನುಸ್ರತ್ ಫತೇ ಅಲಿ ಖಾನ್‌ರ ಅಳಿಯ. ನುಸ್ರತ್ ಅವರೂ ಸಾಕಷ್ಟು ಬಾಲಿವುಡ್ ಸಿನಿಮಾಗಳಲ್ಲಿ ಹಾಡಿದವರು. ನುಸ್ರತ್ ತೀರಿಕೊಂಡು ಆಗಲೇ ಏಳೆಂಟು ವರ್ಷಗಳು ಕಳೆದಿವೆ. ರಾಹತ್ ಅವರ ಅಜ್ಜ ಉಸ್ತಾದ್ ಫತೇ ಅಲಿ ಖಾನ್ ಪಾಕಿಸ್ತಾನದ ಪ್ರಖ್ಯಾತ ಖವ್ವಾಲಿ ಗಾಯಕ



ಆಗಿದ್ದರು. ಈ ಪರಂಪರೆಯ ಮಾಧುರ್ಯ ರಾಹತ್ ಹಾಡುಗಳಲ್ಲೂ ಇದೆ. ಅದಕ್ಕೆಂದೇ ಅವರಿಗೆ ಡಿಮ್ಯಾಂಡಪ್ಪೋ ಡಿಮ್ಯಾಂಡು. 2003ರಲ್ಲಿ ಪಾಪ್ ಎಂಬ ಬಾಲಿವುಡ್‌ಗೆ ಸಿನಿಮಾಗೆ ಹಾಡಿದ ಅವರು, ಓಂ ಶಾಂತಿ ಓಂ, ಸಿಂಗ್ ಈಸ್ ಕಿಂಗ್, ಬದ್ಮಾಶ್ ಕಂಪೆನಿ, ಬಾಡಿ ಗಾರ್ಡ್, ದೇಡ್ ಇಶ್ಕಿಯಾ ಮುಂತಾದ ಸೂಪರ್‌ಹಿಟ್ ಚಿತ್ರಗಳ ಸಹಿತ 68ಕ್ಕೂ ಹೆಚ್ಚು ಸಿನಿಮಾಗಳಲ್ಲಿ ಹಾಡಿದ್ದಾರೆ.

ರಾಹತ್ ಅವರದ್ದೂ ಪ್ರೇಮವಿವಾಹವೇ. ನಿದಾಳನ್ನು ಮದುವೆಯಾಗಿದ್ದು 2001ರಲ್ಲಿ. ಮೂರು ಮಕ್ಕಳಿದ್ದಾರೆ. ಇಂತಹ ಸಂಸಾರವನ್ನು ಬಿಟ್ಟು ಅದ್ಯಾವುದೋ ಮಾಡೆಲ್ ಹಿಂದೆ ಹೋದಾರೆಯೆ.. ಅನ್ನುವುದು ಅಭಿಮಾನಿಗಳ ಪ್ರಶ್ನೆ. ಸುಮ್ಮನೇ ಸುದ್ದಿ ಹುಟ್ಟುವುದಿಲ್ಲ ಎನ್ನುವುದು ಪತ್ರಕರ್ತರ ಅನುಮಾನ. ರಾಹತ್ ಭಾರತಕ್ಕೆ ಬರದೆ 2 ವರ್ಷಗಳಾದವು. 2011ರಲ್ಲಿ ದೆಹಲಿ ವಿಮಾನ ನಿಲ್ದಾಣದಲ್ಲಿ ಅಧಿಕ ವಿದೇಶೀ ಕರೆನ್ಸಿ ಹೊಂದಿದ್ದಕ್ಕೆ ಪೊಲೀಸರ ಬಂಧನಕ್ಕೆ ಒಳಗಾಗಿದ್ದ ರಾಹತ್, ‘ಎಷ್ಟು ಕರೆನ್ಸಿ ಇಟ್ಟುಕೊಳ್ಳಬೇಕು ಎಂಬ ಮಿತಿಯ ಬಗ್ಗೆ ಗೊತ್ತಿರಲಿಲ್ಲ’ ಎಂದು ಹೇಳಿದ್ದರು. ಈಗ ತಯಾರಾಗಿರುವ ಅವರ ಹೊಸ ಆಲ್ಬಂನಲ್ಲಿ ಪ್ರಿಯಾಂಕಾ ಚೋಪ್ರಾ ಜತೆಗೆ ಡುಯೆಟ್ ಒಂದನ್ನು ಹಾಡಿದ್ದು ಹೊಸ ಸುದ್ದಿ.



## ಮೇರಿ ಆತ್ಮಕಥೆ

ಎಂ.ಸಿ. ಮೇರಿ ಕೋಮ್ ತಮ್ಮ ಆತ್ಮಕಥೆ ‘ಅನ್‌ಬ್ರೇಕೆಬಲ್’ ಅನ್ನು ಹೊರತಂದಿದ್ದಾರೆ. ಐದು ಸಲ ಬಾಕ್ಸಿಂಗ್ ವಿಶ್ವಚಾಂಪಿಯನ್ ಆಗಿ, ಒಲಿಂಪಿಕ್ಸ್‌ನಲ್ಲಿ ಭಾರತಕ್ಕೆ ಕಂಚಿನ ಪದಕ ತಂದಿತ್ತ ಅವರ ಗಮನವೆಲ್ಲ ಈಗ ಮುಂದಿನ ವರ್ಷ ರಿಯೋದಲ್ಲಿ ನಡೆಯಲಿರುವ ಒಲಿಂಪಿಕ್ಸ್ ಮೇಲೆ. ಅದಾಗಲೇ ಅದಕ್ಕೆ ಸಿದ್ಧತೆ ಶುರು ಮಾಡಿದ್ದ ಮೇರಿ ಕೋಮ್, ಆ ನಡುವೆ ಆತ್ಮಕಥೆಯನ್ನು ಹೊರ ತಂದಿದ್ದಾರೆ. ಮುಂಬೈಯಲ್ಲಿ ಸ್ವತಃ ಅಮಿತಾಭ್ ಬಚ್ಚನ್ನರೇ ಬಂದು ಪುಸ್ತಕ ಬಿಡುಗಡೆ ಮಾಡಿರುವುದು ವಿಶೇಷ. ಮಣಿಪುರದ ಗುಡ್ಡಗಾಡಿನಲ್ಲಿ ಹುಟ್ಟಿ ಬೆಳೆದ ಹೆಣ್ಣುಮಗಳೊಬ್ಬಳು ಅಗಾಧ ಕಷ್ಟಗಳ ನಡುವೆಯೂ ಕನಸಿನ ಗುರಿ ಮುಟ್ಟಿದ ಕಥೆ ಈ ಪುಸ್ತಕದಲ್ಲಿದೆ. ಅದಕ್ಕಿಂತ ಮುಖ್ಯವಾಗಿ 33ರ ಹರೆಯದ ಅವಳಿ ಮಕ್ಕಳ ತಾಯಿಯೊಬ್ಬಳು ಸತತವಾಗಿ ಆರು ವರ್ಷಗಳಿಂದ ವಿಶ್ವ ಬಾಕ್ಸಿಂಗ್ ಶಿಖರದಲ್ಲಿ ಮಿಂಚುತ್ತಿರುವುದು ಅಭಿಮಾನಿಗಳಿಗೆ ಖುಷಿ ಹೆಚ್ಚಿಸಿರುವ ಸಂಗತಿ.

ಯಾವತ್ತೂ 48 ಕೆ.ಜಿ ವಿಭಾಗದಲ್ಲಿ ಸೆಣಸುವ ಮೇರಿ, ಮುಂದಿನ ಒಲಿಂಪಿಕ್ಸ್‌ನಲ್ಲಿ 51 ಕೆ.ಜಿ ವಿಭಾಗದಲ್ಲಿ ಸೆಣಸಬೇಕಿದೆ. ಈ ಮಧ್ಯೆ ಇಂಫಾಲ್‌ನಲ್ಲಿ ಬಾಕ್ಸಿಂಗ್ ಅಕಾಡೆಮಿ ಸ್ಥಾಪಿಸಿರುವ ಮೇರಿ, ಬೆಂಗಳೂರು ಸಹಿತ ದೇಶದ ಹಲವು ನಗರಗಳಲ್ಲಿ ಅಕಾಡೆಮಿಗಳನ್ನು ಸ್ಥಾಪಿಸಿರುವುದಾಗಿ ಹೇಳಿರುವುದು ಹೆಣ್ಣುಮಕ್ಕಳಿಗಂತೂ ಸಂತಸದ ಸುದ್ದಿ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65